<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.59/2018. P.W.-1.**

ದಿನಾಂಕ:**18.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ಸಿ ಎಂ ಜಿ ವಕೀಲರಿಂದ:-

ನಾನು ದ್ವಿತೀಯ ಪಿ ಯು ಸಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ್ ಸ್ವಲ್ಪ ಸ್ವಲ್ಪ ಬರುತ್ತದೆ. ಈ ದಾವೆಯನ್ನು ಏನೇನೂ ಬರೆದಿದ್ದಾರೆ ಎಂದು ವಕೀಲರಿಂದ ತಿಳಿದುಕೊಂಡಿರುತ್ತೇನೆ. ನಮ್ಮ ಜಮೀನಿನಲ್ಲಿ ಪಟ್ಟಣಗೆರೆ ಪಂಚಾಯಿತಿಯವರು ಬೋರ್ವೆಲ್ ಕೊರೆಸಿದ್ದು, ಸದರಿ ಜಾಗ ನಮ್ಮದು ಎಂದು ಘೋಷಿಸಿ ಸ್ವಾಧೀನಬಿಡಿಸಿಕೊಡುವಂತೆ ಸಲ್ಲಿಸಿರುತ್ತೇನೆ. ನಾವು ಮೊದಲಿಗೂ ಸಹ: ಇದೇ ಪರಿಹಾರವನ್ನ ಕೋರಿ ದಾವೆ ಹೂಡಿದ್ದೆ. ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಎಲ್ಲಾ ವಿಚಾರಗಳನ್ನು ಹೇಳಿರುತ್ತೇನೆ.

ನನ್ನ ಜಮೀನಿನಲ್ಲಿ ಮೊದಲು 2 ಬೋರ್ ಇತ್ತು, ಆ ನಂತರ ಪಂಚಾಯಿತಿಯವರು 1 ಬೋರ್ ತೆಗೆಸಿರುತ್ತಾರೆ. ನಾನು 2003 ರಲ್ಲಿ ಒಂದು ಬೋರ್ ಕೊರೆಸಿರುತ್ತೇನೆ, ಅದು ನೀರು ಕಡಿಮೆಯಾಗಿ ಉಪಯೋಗಿಸಲು ವಿಫಲವಾದ ನಂತರ ಇನ್ನೊಂದು ಬೋರ್ ಅನ್ನು 2017 ರಲ್ಲಿ ಇನ್ನೊಂದು ಬೋರ್ ಕೊರೆಸಿರುತ್ತೇನೆ. ಪಂಚಾಯಿತಿಯವರು ದಿ:12.01.2018 ರಂದು ನನ್ನ ಜಮೀನಿನಲ್ಲಿ ಬೋರ್ ಕೊರೆಸಿರುತ್ತಾರೆ. ನನ್ನ ಜಮೀನಿನ ಸರ್ವೆ ನಂಬರ್ 7/3 ಆಗಿರುತ್ತದೆ. ಮೂಲ ಸರ್ವೆ ನಂ.7 ರಲ್ಲಿ ಒಟ್ಟು ಎಷ್ಟು ಜಮೀನು ಇವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 7/1, 7/2 ಯಾರದ್ದು ಎಂದು ನನಗೆ ಗೊತ್ತಿಲ್ಲ.

ಪಟ್ಟಣಗೆರೆಯಿಂದ ಮರಡಿಹಳ್ಳಿಗೆ ಒಂದು ಬಂಡಿ ರಸ್ತೆಯು ಪುರಾತನಕಾಲದಿಂದಲೂ ಇದೆ ಎಂದರೆ ಸರಿ. ಬಂಡಿ ರಸ್ತೆಯಾಗಿರುವುದಿಲ್ಲ ಅದು ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಆಲಘಟ್ಟ-ಚೋಮನಹಳ್ಳಿ ಮುಖ್ಯ ರಸ್ತೆಗೆ ಸೇರುತ್ತದೆ ಎಂದರೆ ಸರಿ. ಆ ಕಾರಣ ಅದು ಜಿಲಾ ಮುಖ್ಯ ರಸ್ತೆಯಾಗಿದ್ದು ಅದನ್ನು ಪಿ ಡಬ್ಲ್ಯೂ ಡಿ ಇಲಾಖೆಯು ನಿರ್ವಹಣೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ಮೇಲೆ ನನಗೆ ಹಕ್ಕು-ಅಧಿಕಾರ ಇದೆ. ಅದು ಸಾರ್ವಜನಿಕ ರಸ್ತೆ ಎಂದರೆ ಸರಿಯಲ್ಲ. ನಾನು ಬಂಡಿ ದಾರಿ ಎಂದು ಹೇಳುತ್ತಿರುವ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಅದು

ಸಾರ್ವಜನಿಕ ರಸ್ತೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 7 ರ ಯಾವ ಯಾವ ಭಾಗದಲ್ಲಿ ಸದರಿ ರಸ್ತೆಯು ಹಾದು ಹೋಗುತ್ತದೆ ಎಂದರೆ ಸರ್ವೆ ನಂ.7 ರ ಉತ್ತರ ಮತ್ತು ಪೂರ್ವದಲ್ಲಿ ಹಾದು ಹೋಗಿದೆ. ಸದರಿ ರಸ್ತೆಯು ಒಟ್ಟು 30 ಅಡಿ ಅಗಲದ ರಸ್ತೆಯಾಗಿದ್ದು ಇಕ್ಕೆಲಗಳಲ್ಲಿ 5 ಅಡಿಯ ಫುಟ್‌ಪಾತ್ ಸಹ ಇದೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಕಾಂಕ್ರೀಟ್ ಮತ್ತು ಡಾಂಬರ್ ರಸ್ತೆಯಾಗಿದೆ ಎಂದರೆ ಸರಿ. ಸದರಿ ರಸ್ತೆ ಎಷ್ಟು ಅಡಿ ಅಗಲ ಇದೆ ಎಂದು ನಾನು ಅಳತೆ ಮಾಡಿಲ್ಲ.

ನಾನು ಮೊದಲ ಬಾರಿಗೆ ಕೊರೆಸಿದ ಕೊಳವೆ ಬಾವಿಯಿಂದ ಸದರಿ ರಸ್ತೆಯು ಸು.500 ಮೀ ದೂರದಲ್ಲಿದೆ ಎಂದರೆ ಸರಿಯಲ್ಲ. ನಾನು 2 ನೇ ಬಾರಿ ಕೊರೆಸಿದ ಕೊಳವೆ ಬಾವಿಯು ಸದರಿ ರಸ್ತೆಯಿಂದ 6 ಮೀ ಅಂತರದಲ್ಲಿ ಇದೆ. ಮೊದಲ ಕೊಳವೆ ಬಾವಿಯಿಂದ 2 ನೇ ಬಾರಿಗೆ ನಾನು ಕೊರೆಸಿದ ಕೊಳವೆ ಬಾವಿಗೆ ಎಷ್ಟು ಅಂತರವಿದೆ ಎಂದು ನನಗೆ ಗೊತ್ತಿಲ್ಲ.

ಪಂಚಾಯಿತಿಯವರು ಊರಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾದ ಕಾರಣ ಕೊಳವೆ ಬಾವಿ ತೆಗೆಸಿರುತ್ತಾರೆ ಎಂದರೆ ಸರಿ. ಪಟ್ಟಣಗೆರೆ ಗ್ರಾಮದಲ್ಲಿ ಜನ ಸಂಖ್ಯೆ ಎಷ್ಟು ಎಂದು ನನಗೆ ಗೊತ್ತಿಲ್ಲ. ಸು. 2–3 ಸಾವಿರ ಜನಸಂಖ್ಯೆ ಇರಬಹುದು. ನಮ್ಮ ಊರಿನಲ್ಲಿ ಬರಗಾಲವಿದ್ದ ಕಾರಣ ಪಂಚಾಯಿತಿಯವರು ಅಲ್ಲಲ್ಲಿ ಬೋರ್ವೆಲ್ ಕೊರೆಸುತ್ತಿದ್ದರು ಎಂದರೆ ಸರಿಯಲ್ಲ. ಪಂಚಾಯಿತಿಯವರು ಕೊರೆಸಿರುವ ಕೊಳವೆ ಬಾವಿಯು ರಸ್ತೆಯ ಬದಿಯಲ್ಲಿಯೇ ಬರುತ್ತೆ ಎಂದರೆ ಸರಿಯಲ್ಲ. ಪಂಚಾಯಿತಿಯವರು ರಸ್ತೆ ಮಾರ್ಜಿನ್ ನಲ್ಲಿಯೇ ಬಾವಿ ಕೊರೆಸಿದ್ದಾರೆ ಎಂದರೆ ಸರಿಯಲ್ಲ. ಪಂಚಾಯಿತಿಯವರು ಕೊರೆಸಿರುವ ಕೊಳವೆ ಬಾವಿಯ ಮೇಲೆ ನನಗೆ ಹಕ್ಕು ಇಲ್ಲ ಎಂದರೆ ಸರಿ, ಆದರೆ ಅವರು ನನ್ನ ಜಮೀನಿನಲ್ಲಿ ಬಾವಿ ಕೊರೆಸಿದ್ದಾರೆ. ಪಂಚಾಯಿತಿಯವರು ಹಣ ಹಾಕಿ ರಸ್ತೆ ಬದಿಯಲ್ಲಿ ಕೊಳವೆ ಬಾವಿ ಕೊರೆಸಿದ್ದಾರೆ ಎಂದರೆ ಸಾಕ್ಷಿಯು ಅವರು ನನ್ನ ಜಮೀನಿನಲ್ಲಿ ಬಾವಿ ಕೊರೆಸಿದ್ದಾರೆ ಎಂದು ನುಡಿಯುತ್ತಾರೆ. ನಾನು ವಿನಾ ಕಾರಣ ಪಂಚಾಯಿತಿಯವರು ಕೊರೆಸಿರುವ ಬಾವಿ ಉಪಯೋಗಿಸಲು ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಜಮೀನಿನಲ್ಲಿ ರಸ್ತೆ ಹೋಗಿರುವುದರಿಂದ ನನಗೆ ನಾನು ಹೇಳಿದಂತೆ 1 ಎಕರೆ 27 ಗುಂಟೆ ಸಂಪೂರ್ಣ ಜಮೀನು ಸ್ವಾಧೀನದಲ್ಲಿ ಕೇವಲ ಖಾತೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ 9 ಗುಂಟೆ ಜಾಗ ರಸ್ತೆಗೆ ಹೋಗಿದೆ ಎಂದರೆ ಸರಿಯಲ್ಲ. ನಾನು

ಖಾತೆಯಲ್ಲಿ ಒಟ್ಟು 1 ಎಕರೆ 27 ಗುಂಟೆ ನಮೂದು ಇರುವುದನ್ನು ದುರುಪಯೋಗಪಡಿಸಿಕೊಂಡು ಪಂಚಾಯಿತಿಯವರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ರಸ್ತೆ ಬಿಟ್ಟು ನನಗೆ ಎಷ್ಟು ಜಮೀನು ಉಳಿದಿದೆ ಎಂದು ನಾನು ಸರ್ವೆ ಮಾಡಿಸಿರುತ್ತೇನೆ, ಸದರಿ ಸರ್ವೆಯಂತೆ ನನ್ನ ಜಮೀನು ರಸ್ತೆಗೆ ಹೋಗಿರುವುದಿಲ್ಲ. ಕೊಳವೆ ಬಾವಿಯು ಸಾರ್ವಜನಿಕ ಆಸ್ತಿಯಾಗಿರುವುದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪಂಚಾಯಿತಿಯವರು ಕೊರೆಸಿದ್ದ ಕೊಳವೆ ಬಾವಿಯನ್ನು ಅನಾವಶ್ಯಕವಾಗಿ ಆಳುಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.